**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-7 /PW-10**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಜಯಮ್ಮ |
| ಗಂಡನ ಹೆಸರು | ಃ | ಯಲ್ಲಪ್ಪ |
| ವಯಸ್ಸು | ಃ | 45 |
| ಉದ್ಯೋಗ | ಃ | ಮನೆಗೆಲಸ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಭಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 17-02-2025**

ಚಾಸಾ-1 ನನ್ನ ಗಂಡ, ಚಾಸಾ-4-6 ಮತ್ತು 8-10 ಗೊತ್ತು. ಆರೋಪಿ ಗೊತ್ತು. ಜಾಗೆಯ ಸಲುವಾಗಿ ಸುಮಾರು 3-4 ವರ್ಷಗಳ ಹಿಂದೆ ನನ್ನ ಮತ್ತು ಆರೋಪಿತರ ನಡುವೆ ಜಗಳ ನಡೆದಿದ್ದು ಆಗ ಆರೋಪಿತರು ನನಗೆ ಹೊಡೆ ಬಡೆ ಮಾಡಿ, ಜೀವದ ಬೆದರಿಕೆ ಹಾಕಿರುತ್ತಾರೆ. ಈ ಕುರಿತು ನಾನು ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ತೋರಿಸಿದಾಗ ಸದರಿ ಕಟ್ಟಿಗೆಯಿಂದ ಆರೋಪಿತರು ಹೊಡೆದಿಲ್ಲ ಎಂದು ನುಡಿಯುತ್ತಾರೆ.

(**ಈ ಹಂತದಲ್ಲಿ ಮಾನ್ಯ ಹಿರಿಯ ಸಸಅ ಅವರು** ಸಾಕ್ಷಿಯನ್ನು ಭಾಗಶಃ **ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಹಿರಿಯ ಎಪಿಪಿ ಅವರಿಂದಃ

ದಿನಾಂಕ 21-03-2021 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ಚಾಸಾ-1 ಮನೆಯಲ್ಲಿ ಇದ್ದಾಗ ಆರೋಪಿತರು ನಮ್ಮ ಮನೆಗೆ ಬಂದು ಜಾಗದ ವಿಷಯವಾಗಿ ಚಾಸಾ-1 ರವರ ಜೊತೆ ಜಗಳ ತೆಗೆದು ಚಾಸಾ-1 ರವರ ತಲೆಗೆ ಕಟ್ಟಿಗೆಯಿಂದ ಹೊಡೆದು ಭಾರಿ ಒಳಪೆಟ್ಟು ಮಾಡಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದುಕೊಂಡು ತಡೆದು ನಿಲ್ಲಿಸಿದ್ದು ನಂತರ 3 ನೇ ಆರೋಪಿ ಕೈಗಳಿಂದ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ 2 ನೇ ಆರೋಪಿ ಚಾಸಾ-1 ರವರಿಗೆ ಕೈಗಳಿಂದ ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ಆರೋಪಿತರು ಈಗ ಉಳಿದುಕೊಂಡಿರಿ ಇನ್ನೊಮ್ಮೆ ಸಿಕ್ಕರೇ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಂತರ ನಾನು ಚಾಸಾ-4-6 ಮತ್ತು 8 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ **ಎಲ್.ಎ.ಡಿಸಿ ಇವರಿಂದ**

ಜಗಳ ನಡೆಯುವಾಗ ಚಾಸಾ-7 ರವರು ಇದ್ದರು. ಜಗಳ ನಡೆದಾಗ ನನಗೆ ಪೀಟ್ಸ ಬಂದಿದ್ದು ಬಂಬೇ ಕಂಪನಿಯಲ್ಲಿ ಇದ್ದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಜಗಳ ನಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ನಾಗಮ್ಮ ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಹೇಳಿದಂತೆ ಯಾವುದೇ ಜಗಳ ನಡೆದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ನಮ್ಮ ಜಮೀನು ಖರೀದಿ ಮಾಡಿರುತ್ತಾನೆ ಆದ್ದರಿಂದ ಜಗಳ ನಡೆದಿರುತ್ತದೆ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳವು 3 ನೇ ಆರೋಪಿ ಜಾಗ ಇದೆ ಎಂದರೆ ಸರಿ. ಚಾಸಾ-1 ರವರು ಸರಾಯಿ ಕುಡಿಯುತ್ತಾರೆ ಎಂದರೆ ಸಾಕ್ಷಿ ಒಂದೊಂದು ಸಲ ಕುಡಿಯುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 21.03.2021 ರಂದು ಚಾಸಾ-1 ರವರಿಗೆ ದ್ವಿಚಕ್ರ ವಾಹನ ಬಂದು ಡಿಕ್ಕಿ ಹೊಡೆದಿರುವುದರಿಂದ ಗಾಯವಾಗಿ ಇದರ ಸಂಬಂಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು.3963/2021**

**CW-8 /PW-11**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ನರಸಪ್ಪ |
| ತಂದೆ ಹೆಸರು | ಃ | ಮಾರೆಪ್ಪ |
| ವಯಸ್ಸು | ಃ | 50 |
| ಉದ್ಯೋಗ | ಃ | ವ್ಯಾಪಾರ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 17-02-2025**

ಚಾಸಾ-1, ಚಾಸಾ-4-7 ಗೊತ್ತು. ಆರೋಪಿ ಗೊತ್ತು. ಸುಮಾರು 2-3 ವರ್ಷಗಳ ಹಿಂದೆ ಬೆಳಿಗ್ಗೆ 11.30 ರಿಂದ ಆರೋಪಿತರು ಬಂದು ಚಾಸಾ-1 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ನಾನು ರಸ್ತೆಯ ಮೇಲೆ ಹೋಗುತ್ತಿದ್ದಾಗ ಆರೋಪಿತರು ಚಾಸಾ-1 ರವರಿಗೆ ಹೊಡೆಯುತ್ತಿದ್ದಾಗ ನಾನು ಯಾಕೆ ಹೊಡೆಯುತ್ತೀರಿ ಎಂದು ಹೇಳಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಕಟ್ಟಿಗೆಯನ್ನು ನಾನು ನೋಡಿಲ್ಲ.

(**ಈ ಹಂತದಲ್ಲಿ ಮಾನ್ಯ ಹಿರಿಯ ಸಸಅ ಅವರು** ಸಾಕ್ಷಿಯನ್ನು ಭಾಗಶಃ **ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಹಿರಿಯ ಎಪಿಪಿ ಅವರಿಂದಃ

ದಿನಾಂಕ 21-03-2021 ರಂದು ಮಧ್ಯಾಹ್ನ 12.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ಆರೋಪಿತರು ಚಾಸಾ-1 ರವರ ಮನೆಗೆ ಬಂದು ಜಾಗದ ವಿಷಯವಾಗಿ ಜಗಳ ತೆಗೆದು ನಾನು ಮನೆಯಿಂದ ಹೊರಗೆ ಬಂದು ನೋಡಿದಾಗ 1 ನೇ ಆರೋಪಿ ಕಟ್ಟಿಗೆಯಿಂದ ಚಾಸಾ-1 ರವರ ತಲೆಗೆ ಹೊಡೆದು ಭಾರಿ ಒಳಪೆಟ್ಟು ಮಾಡಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದುಕೊಂಡು ತಡೆದು ನಿಲ್ಲಿಸಿದ್ದು ನಂತರ 3 ನೇ ಆರೋಪಿ ಕೈಗಳಿಂದ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ 2 ನೇ ಆರೋಪಿ ಚಾಸಾ-1 ರವರಿಗೆ ಕೈಗಳಿಂದ ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ನಂತರ ಆರೋಪಿತರು ಈಗ ಉಳಿದುಕೊಂಡಿರಿ ಇನ್ನೊಮ್ಮೆ ಸಿಕ್ಕರೇ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಅ ದಿನ ಹೊಡೆಯಲು ಬಳಸಿದ ಕಟ್ಟಿಗೆಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ಮುಮಾ-1 ಎಂದು ಗುರುತಿಸಲಾಯಿತು. ಜಗಳವನ್ನು ಚಾಸಾ-4-7 ರವರು ಬಿಡಿಸಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಎಲ್.ಎ.ಡಿಸಿ ಇವರಿಂದ**

ನನ್ನ ಮತ್ತು ಚಾಸಾ-1 ರವರ ಮನೆ 300 ಫೀಟ ಅಂತರ ಇರುತ್ತದೆ. ಚಾಸಾ-1 ಮತ್ತು ನಾನು ಒಂದೇ ಜಾತಿಗೆ ಸೇರಿದವರು. ಘಟನೆ ನಡೆದ ದಿನಾಂಕ ತಿಂಗಳು ವರ್ಷ ನನಗೆ ಗೊತ್ತಿಲ್ಲ. ಜಗಳ ನಡೆದಾಗ ಸುಮಾರು 4-8 ಜನರು ಇದ್ದರು. ಮುಮಾ-1 ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತೇವೆ ಎಂದರೆ ಸರಿ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ. 3 ನೇ ಆರೋಪಿ ಚಾಸಾ-1 ರವರ ಪ್ಲಾಟ್ ಖರೀದಿ ಮಾಡಿರುತ್ತಾರೆ ಮತ್ತುಚಾಸಾ-1 ರವರು ಮರಳಿ ಪಡೆಯಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಜಗಳ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ಅವರ ಮನೆಯವರು ಚಿಕಿತ್ಸೆಗೆ ಕರೆದುಕೊಂಡು ಅದೇ ದಿನ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರಿಗೆ ಸರಾಯಿ ಕುಡಿಯುವ ಚಟ ಇದೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ದ್ವಿಚಕ್ರ ವಾಹನ ಬಂದು ಡಿಕ್ಕಿ ಹೊಡೆದಿರುವುದರಿಂದ ಗಾಯವಾಗಿ ಇದರ ಸಂಬಂಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಜಗಳ ನೋಡಿಲ್ಲ ಮತ್ತು ಬಿಡಿಸಿಲ್ಲ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**